**<u>ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>**

**<u>ದಾಂಡೇಲಿ</u>**

**<u>ಸಿ. ಸಿ.- 675/2025</u>**

**ಫಿರ್ಯಾದುದಾರರು :** ಅಕ್ಷಯ ಕೋ-ಆಪ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್,
ಪ್ರಧಾನ ಕಛೇರಿ, ಕಾರವಾರ, ತಾಃ ಕಾರವಾರ, (ಉ.ಕ.)
ಇದರ ಪರವಾಗಿ ದಾಂಡೇಲಿ ಶಾಖಾ ವ್ಯವಸ್ಥಾಪಕರು,
Mr. ಸಿ.ಜೆ.ಗೌಡ, ಸಾಃ ಟೌನ್ ಶಿಫ್, ದಾಂಡೇಲಿ,
ತಾಃ ದಾಂಡೇಲಿ, ಜಿಲ್ಲೆಃ ಉತ್ತರ ಕನ್ನಡ.

**---ವಿರುದ್ಧ---**

**ಆರೋಪಿ :** ಶ್ರೀಮತಿ ಶೀತಲ್ ಜಗದೀಶ ಧಾರವಾಡ್ಕರ್,
ವಯಸ್ಸುಃ 42 ವರ್ಷ,
ಉದ್ಯೋಗಃ ವ್ಯಾಪಾರ,
ಸಾಕೀನಃ ಮನೆ ನಂ.201/B SIHS,
ಟೌನ್ ಶಿಪ್, ದಾಂಡೇಲಿ, ತಾಃ ದಾಂಡೇಲಿ,
ಜಿಲ್ಲೆಃ ಉತ್ತರ ಕನ್ನಡ.

**ಆರೋಪಿಯಾದ ನಿಮ್ಮ ವಿರುದ್ಧ ಈ ಕೆಳಗಿನಂತೆ ನಾನು ಹೊರಿಸಿರುವಃ**

**<u>ಆ ಪಾ ದ ನೆ</u>**

ಏನೆಂದರೆ ಆರೋಪಿಯಾದ ನೀವು ಫಿರ್ಯಾದಿ ಸಂಸ್ಥೆಯ ಗ್ರಾಹಕರಾಗಿದ್ದು, ಆರೋಪಿಯಾದ ನೀವು ಫಿರ್ಯಾದಿ ಸಂಸ್ಥೆಯಿಂದ ರೂ.5,50,000/- ರೂಪಾಯಿಗಳನ್ನು ದಿನಾಂಕಃ 31-10-2023 ರಂದು ವ್ಯಾಪಾರ ಸಾಲವಾಗಿ ಪಡೆದುಕೊಂಡಿದ್ದು, ನಂತರ ಫಿರ್ಯಾದಿ ಸಂಸ್ಥೆಯವರು ಕೆಲವು ದಿನಗಳು ಬಿಟ್ಟು ನಿಮಗೆ ಸದರಿ ಹಣವನ್ನು ಮರಳಿ ಕೊಡಲು ಕೇಳಿದಾಗ, ನೀವು ದಿನಾಂಕ 07.07.2025 ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಜೆ.ಎನ್. ರಸ್ತೆ, ದಾಂಡೇಲಿ ಶಾಖೆಯ ನಿಮ್ಮ ಖಾತೆ ನಂ. 64025665643

ನೇದ್ದಕ್ಕೆ ಸಂಬಂಧಿಸಿದ ಚೆಕ್ ನಂ.394864 ಚೆಕ್ಕನ್ನು ರೂ.5,35,000/- ಹಣದ ಪಾವತಿಗಾಗಿ ಫಿರ್ಯಾದಿಗೆ ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದಿದಾರರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಜೆ.ಎನ್. ರಸ್ತೆ, ದಾಂಡೇಲಿ ಶಾಖೆಯಲ್ಲಿ ಸಲ್ಲಿಸಿದಾಗ ಸದರಿ ಬ್ಯಾಂಕಿನವರು ಸದರಿ ಚೆಕ್ಕನ್ನು ಪರಿಶೀಲಿಸಿ ದಿನಾಂಕ 07.07.2025 ರಂದು "Funds Insufficient" ಎಂಬ ಹಿಂಬರಹದೊಂದಿಗೆ ಉತ್ತರಿಸಿರುತ್ತಾರೆ. ನಂತರ ಫಿರ್ಯಾದಿದಾರರು ತಮ್ಮ ವಕೀಲರ ಮೂಲಕ ದಿನಾಂಕಃ 16-07-2025 ರಂದು ನೋಂದಾಯಿತ ಅಂಚೆ ಮೂಲಕ ನೋಟೀಸನ್ನು ಜಾರಿ ಮಾಡಿದ್ದರೂ ಸಹ ನೀವು ಚೆಕ್ಕಿನ ಹಣ ಪಾವತಿ ಮಾಡದೇ ಉದ್ದೇಶಪೂರ್ವಕವಾಗಿ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲವೆಂಬ ವಿಚಾರವನ್ನು ತಿಳಿದಿದ್ದು ಚೆಕ್ಕನ್ನು ನೀಡಿ ನೆಗೋಶಿಯಬಲ್ ಎನ್ಸಟ್ರುಮೆಂಟ್ ಕಾಯ್ದೆ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

**ಆರೋಪಿಯ ಹೇಳಿಕೆ**

1. **ಪ್ರಶ್ನೆಃ** ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೇ?

**ಉತ್ತರಃ**

2. **ಪ್ರಶ್ನೆಃ** ಈ ಆಪಾದನೆ ಬಗ್ಗೆ ನೀವು ನಿಮ್ಮ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

**ಉತ್ತರಃ**

(ಈ ಆಪಾದನೆಯನ್ನು ದಿನಾಂಕಃ 25.03.2026 ರಂದು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ, ವಿವರಿಸಿ, ಅವರಿಂದ ಉತ್ತರ ಪಡೆದು ದಾಖಲಿಸಿದ್ದೇನೆ.)

**ಸಹಿ ಇದೆ-**

**(ತೇಜಸ್ವಿನಿ ಸೊಗಲದ)**
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ದಾಂಡೇಲಿ**